

# ದೀಪಾವಳಿಗೆ 'ವರ್ಮಾ ಪಟಾಕಿ'

ಕನ್ನಡದಲ್ಲಿ ರಾಂಗೋಪಾಲ್ ವರ್ಮಾ ಸಿನಿಮಾ ಮಾಡುತ್ತಿದ್ದಾರೆ ಎಂಬುದು ನಿಮಗೆಲ್ಲ ಈಗ ಹಳೆಯ ಸುದ್ದಿಯೇ. ವರ್ಮಾ ನಿರ್ದೇಶನದ ಬಹುಭಾಷಾ ಚಿತ್ರ 'ಕಿಲ್ಲಿಂಗ್ ವೀರಪ್ಪನ್' ಸಿನಿಮಾ ವಿಚಾರ ಆಗಿಂದಾಗ್ಗೆ ಓದಿಕೊಳ್ಳುತ್ತಲೇ ಇದ್ದರೂ ಆದರೆ ರಾಂಗೋಪಾಲ್ ವರ್ಮಾ ಎಂದಾಕ್ಷಣವೇ ಸಿನಿ ಪ್ರೇಕ್ಷಕನ ಕಿವಿ ಒಮ್ಮೆ ನೆಟ್ಟಗಾಗುತ್ತದೆ. ವರ್ಮಾ ಗಳಿಸಿಕೊಂಡ ಖ್ಯಾತಿ ಅಂಥದ್ದು, ಮತ್ತು ಅವರ ಕಾರ್ಯ ವೈಖರಿಯೂ ಅಷ್ಟೇ ವಿಭಿನ್ನವಾದದ್ದು. ಇಲ್ಲವಾದರೆ ಈ ಹಿಂದೆ ವೀರಪ್ಪನ್ ಬಗ್ಗೆ ಸಾಕಷ್ಟು ಸಿನಿಮಾಗಳು ಬಂದು ಹೋಗಿದ್ದರೂ ವರ್ಮಾ ನಿರ್ದೇಶನದ 'ಕಿಲ್ಲಿಂಗ್ ವೀರಪ್ಪನ್' ಇಷ್ಟೊಂದು ಕುತೂಹಲ ಕೆರಳಿಸುವ ಕಾರಣವೇನು!

ಈಗ ಇಷ್ಟೆಲ್ಲ ಹೇಳಿದ್ದು ಯಾಕೆಂದರೆ, 'ಕಿಲ್ಲಿಂಗ್ ವೀರಪ್ಪನ್' ಚಿತ್ರವನ್ನು ನಿರೀಕ್ಷಿಸುತ್ತಿರುವ ಪ್ರೇಕ್ಷಕ ಪ್ರಭುವಿಗೆ ವರ್ಮಾ ಮತ್ತೊಂದು ರುಚಿಯುಂಡೆ ನೀಡಿದ್ದಾರೆ. ಈ ಹಿಂದೆ ಮೂರು ಭಾಷೆಗಳಲ್ಲಿ ಚಿತ್ರದ ಟ್ರೇಲರ್ ಬಿಡುಗಡೆ ಮಾಡಿ ಸಾಕಷ್ಟು ಕುತೂಹಲ ಕೆರಳಿಸಿದ್ದ ವರ್ಮಾ ಈಗ ಯೂ ಟ್ಯೂಬ್‌ನಲ್ಲಿ ಎರಡನೇ ಟ್ರೇಲರ್ ಹರಿಬಿಟ್ಟಿದ್ದಾರೆ.

ಹೈದರಾಬಾದ್‌ನ ಸ್ಟುಡಿಯೊದಲ್ಲಿ ಕುಳಿತು ಸಂಪೂರ್ಣವಾಗಿ ಸಿನಿಮಾದ ಚಿತ್ರೀಕರಣೋತ್ತರ ಕೆಲಸದಲ್ಲಿ ತೊಡಗಿಕೊಂಡಿರುವ ವರ್ಮಾ, ಅಲ್ಲಿಯೇ ಕೂತು ಕನ್ನಡ, ತೆಲುಗು, ತಮಿಳು ಭಾಷೆಗಳಲ್ಲಿ ಟ್ರೇಲರನ್ನು 'ಅಪ್‌ಲೋಡ್' ಮಾಡಿದ್ದಾರೆ. ಅಕ್ಟೋಬರ್ 18ರ ರಾತ್ರಿ 10.40 ಗಂಟೆಗೆ ವೀರಪ್ಪನ್‌ಗೆ ಪೊಲೀಸರು ಗುಂಡಿಕ್ಕಿದ್ದು, ಅದೇ ಸಮಯಕ್ಕೆ ಟ್ರೇಲರ್ ಬಿಡುಗಡೆಯ ಮಾಡಿರುವುದು ವಿಶೇಷ.

ಟ್ರೇಲರ್‌ನಲ್ಲಿ ವರ್ಮಾರ 'ಪರ್ಫೆಕ್ಷನ್' ಎದ್ದು ಕಾಣುತ್ತದೆ. ಹಿನ್ನೆಲೆ ಸಂಗೀತ, ದೃಶ್ಯಗಳ ಶ್ರೀಮಂತಿಕೆ, ಕ್ಯಾಮೆರಾ ಕೈಚಳಕ ಎಲ್ಲವೂ ಸಿನಿಮಾದ ಮೇಲಿನ ನಿರೀಕ್ಷೆಯನ್ನು ಹೆಚ್ಚಿಸುವಂತಿವೆ. ಈಗಾಗಲೇ ಬಹುತೇಕ ಕೆಲಸ ಮುಗಿದಿದೆ. ಸಿನಿಮಾ ಆರಂಭವಾಗುವಾಗಲೇ ಬಿಡುಗಡೆಯ ದಿನಾಂಕವನ್ನೂ ಘೋಷಿಸಿ, ಅದಕ್ಕೆ ಬದ್ಧರಾಗಿ ಕೆಲಸ ಮಾಡುತ್ತಿರುವ ಅವರು, ನವೆಂಬರ್ 1ರಂದು ಹಾಡುಗಳನ್ನು ಕೇಳುಗರಿಗೆ ತಲುಪಿಸುವ ತಯಾರಿಯಲ್ಲಿದ್ದಾರೆ. ಅದಾದ ನಂತರ, ದೀಪಾವಳಿಗೆ, ಅಂದರೆ ನವೆಂಬರ್ 12ರಂದು ಕನ್ನಡ, ತೆಲುಗು, ತಮಿಳಿನಲ್ಲಿ ಸಿನಿಮಾ ಪ್ರೇಕ್ಷಕನೆದುರು ಬರಲಿದೆ. ಹಿಂದಿಯಲ್ಲಿ ಸ್ವಲ್ಪ ತಡವಾಗಿ ಚಿತ್ರ ಬರಲಿದೆ.

# ಮತ್ತೆ ಬಂದ 'ಬಿಗ್ ಬಾಸ್'

ಎರಡು ಸೀಸನ್‌ಗಳ ಮೂಲಕ ಕನ್ನಡದ ಪ್ರೇಕ್ಷಕನನ್ನು ಸೆಳೆದಿದ್ದ 'ಬಿಗ್ ಬಾಸ್' ಮತ್ತೆ ಬಂದಿದೆ. ಮೊದಲ ಸೀಸನ್‌ನಲ್ಲಿ ದೊಡ್ಡ ಮಟ್ಟಿಗೆ ಜನರನ್ನು ಸೆಳೆದಿದ್ದ 'ಬಿಗ್ ಬಾಸ್' ಎರಡನೇ ಸೀಸನ್ನಿನಲ್ಲಿ ಕೊಂಚ ಕಳೆಗುಂದಿದ್ದಂತೂ ಹೌದು. ಆದರೀಗ ಮೂರನೇ ಆವೃತ್ತಿಯೊಂದಿಗೆ ಮತ್ತೆ ತನ್ನ ಹಳೆಯ ವೈಭೋಗವನ್ನು ಮರಳಿ ಪಡೆಯುವ ಎಲ್ಲ ಪ್ರಯತ್ನವನ್ನೂ 'ಬಿಗ್ ಬಾಸ್' ಆರಂಭಿಸಿದ್ದಾನೆ.

ಪ್ರಮುಖ ಅಂಶವೆಂದರೆ ಈ ಬಾರಿ 'ಬಿಗ್ ಬಾಸ್' ಸ್ಪರ್ಧಿಗಳನ್ನು ಕೂಡಿಹಾಕುತ್ತಿರುವುದು ಪುಣೆಯ ಲೋನಾವಾಲದಲ್ಲಿರುವ ಮನೆಯಲ್ಲಲ್ಲ. ಬದಲಾಗಿ ಬೆಂಗಳೂರಿನ ಬಿಡದಿಯ ಬಳಿಯಲ್ಲೇ ದೊಡ್ಡ ಮನೆಯ ಸೆಟ್ ಹಾಕಲಾಗಿದೆ. ಹಾಗಾಗಿ ಕನ್ನಡದ ನೆಲದಲ್ಲೇ ನಡೆಯುತ್ತಿರುವ ಮೊದಲ 'ಬಿಗ್ ಬಾಸ್' ಇದು. ಈ ಮನೆ ಈವರೆಗೆ ಭಾರತದಲ್ಲಿ ನಡೆದ ಎಲ್ಲ 'ಬಿಗ್ ಬಾಸ್' ಮನೆಗಳಿಗಿಂತ ದೊಡ್ಡದು. ಅದಕ್ಕಾಗಿ ಅಂದಾಜು ಒಂದೂವರೆ ಕೋಟಿ ರೂಪಾಯಿ ವೆಚ್ಚ ಮಾಡಲಾಗಿದೆ.

ಈ ಬಾರಿ ವಿವಾದಗಳಿಗಿಂತ ಹೆಚ್ಚಾಗಿ ಭಾವನಾತ್ಮಕವಾಗಿ ತಟ್ಟುವ ಸನ್ನಿವೇಶಗಳಿಂದ ಪ್ರೇಕ್ಷಕನಿಗೆ ಹತ್ತಿರವಾಗಲು 'ಬಿಗ್ ಬಾಸ್' ಯತ್ನ ನಡೆಸಿದ್ದಾನೆ. ಈ ಮೊದಲು ಹತ್ತು ಸ್ಪರ್ಧಿಗಳಿರುತ್ತಿದ್ದರೆ ಈ ಬಾರಿ 15 ಸ್ಪರ್ಧಿಗಳು ಮನೆಯೊಳಕ್ಕೆ ಹೋಗಲಿದ್ದಾರೆ. ಇವರನ್ನು 55 ಕ್ಯಾಮೆರಾಗಳು ಸದಾ ಹಿಂಬಾಲಿಸಲಿವೆ.

ಮೊದಲ ಆವೃತ್ತಿ 'ಈ ಟಿವಿ' ವಾಹಿನಿಯಲ್ಲಿ ಪ್ರಸಾರವಾಗಿದ್ದರೆ ಎರಡನೇ ಆವೃತ್ತಿ ಪ್ರಸಾರವಾಗಿದ್ದು 'ಸುವರ್ಣ'ದಲ್ಲಿ. ಈಗ ಮೂರನೇ ಆವೃತ್ತಿ ಮತ್ತೆ 'ಕಲರ್ಸ್ ಕನ್ನಡ'ದಲ್ಲಿ ಪ್ರಸಾರವಾಗುತ್ತಿದೆ. ಈ ಬಾರಿಯೂ ಗೆದ್ದವರು ಬರೋಬ್ಬರಿ ರೂ. 50 ಲಕ್ಷವನ್ನು ತಮ್ಮದಾಗಿಸಿಕೊಳ್ಳಲಿದ್ದಾರೆ. ಪ್ರತಿ ಬಾರಿಯಂತೆ ಈ ಬಾರಿಯೂ ನಟ ಸುದೀಪ್ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ.

■ ವೈದ್ಯ

